

# ಹಸ್ಸು ಬಿಸ್ಕೆಟ್

■ **ಕಿರಣ್ ಕುಮಾರ್ ಕೆ.ಆರ್.**
ಕಲೆ: ವಿಶ್ವನಾಥ ಎ.ಎಸ್.

ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ನೋಡಿಕೊಂಡು ಕೂದಲು ಸರಿಪಡಿಸಿಕೊಂಡ ಸಿದ್ರಾಮ. ಅವನಿಗೆ ಸಂಜೆ ತಿಂದಿದ್ದು ತಿಂದ ಹಾಗೆ ಅನ್ನಿಸಿರಲಿಲ್ಲ. ತಿಂದ ಎರಡು ಗಂಟೆಗೇ ಮತ್ತೆ ಹೊಟ್ಟೆ ಹಸಿಯತೊಡಗಿತ್ತು. ಶಿಫ್ಟ್ ಮುಗಿಯಲು ಇನ್ನೂ ಎರಡು ಮೂರು ಗಂಟೆ ಉಳಿದಿತ್ತು. ಮನೆಗೆ ಹೋಗುವ ಮೊದಲು ಎರಡು ಫ್ಲೋರುಗಳನ್ನು ಕ್ಲೀನ್ ಮಾಡುವುದಿತ್ತು. ರಾತ್ರಿಯ ನಿಶಬ್ದದಲ್ಲಿ ಗುಂಯ್ ಎನ್ನುವ ವ್ಯಾಕ್ಯೂಂ ಕ್ಲೀನರಿನ ಸದ್ದು ಮಾತ್ರ ಅವನ ಸಂಗಾತಿ. ಕೆಲವು ದಿನ ಸದ್ದಿನ ಜೊತೆಗೆ ಹಸಿವು ಕೂಡ ಸಂಗಾತಿ. ಇವತ್ತು ಅಂಥದ್ದೇ ಒಂದು ದಿನ. ಸಂಬಳವಾಗಿರಲಿಲ್ಲ, ಹಾಗಾಗಿ ಮತ್ತೆ ತಿನ್ನುವಷ್ಟು ದುಡ್ಡೂ ಕೈಯಲ್ಲಿರಲಿಲ್ಲ. ಮನೆಗೆ ಹೋಗಿ ಗಂಜಿ ನುಂಗಿ ಹಸಿವು ನೀಗಿಸಿಕೊಂಡುಬಿಡುವ ಆಸೆಯೊಂದೇ ಅವನಿಗೆ ಕೆಲಸ ಮಾಡುವ ಚೈತನ್ಯ ಕೊಡುತ್ತಿತ್ತು.

ಸಿದ್ರಾಮನಿಗೆ ಕೆಲಸದ ಮೇಲೆ ಶ್ರದ್ಧೆ ಅಪಾರ. ತಾನೊಬ್ಬನೇ ಮೂರು ಫ್ಲೋರುಗಳ ಕೆಲಸ ಮುಗಿಸಬೇಕೆಂಬ ಛಲ ಬೇರೆ. ಬೇರೆಯವರ ಜೊತೆ ಸೇರಿ ಕೆಲಸ ಮಾಡಿದರೆ ಕೆಲಸ ಮಾಡಿದ ಹಾಗೆ ಅನ್ನಿಸುತ್ತಲೇ ಇರಲಿಲ್ಲ. ಮಾಡಿದರೆ ಪೂರ್ತಿ ಕೆಲಸ ತಾನೊಬ್ಬನೇ ಮಾಡಬೇಕು. ಹಾಗಾದರೆ ಮಾತ್ರ ಮನೆಗೆ ಹೋದರೆ ಕಣ್ಣು ತುಂಬ ನಿದ್ದೆ. ಆದರೆ ಇವತ್ತು ಕಾಡುತ್ತಿದ್ದ ಹಸಿವಿನಿಂದಾಗಿ ಕೈಗಳಲ್ಲಿ ಬಲವೇ ಇಲ್ಲ. ಮೂಲೆಗಳಲ್ಲಿನ ಧೂಳನ್ನು ಹಾಗೆಯೇ ಬಿಟ್ಟ. ಅರ್ಧಂಬರ್ಧ ಕೆಲಸ ಮಾಡಿದ್ದಕ್ಕೆ ಇವತ್ತು ನಿದ್ದೆ ಬರುವುದು ತಡವಾಗುತ್ತದೆ ಎಂದುಕೊಂಡ.

ಮೊದಲು ಹೊಟ್ಟೆಯ ಒಂದು ಮೂಲೆ ಖಾಲಿಯಾದಂತೆ ಅನ್ನಿಸಿದ್ದು ಹೋಗಹೋಗುತ್ತಾ ಹೊಟ್ಟೆಯೆಲ್ಲ ಖಾಲಿಯಾಗಿ ಹಸಿವು ಕೂಡ ದೇಹದ ತುಂಬ ವ್ಯಾಪಿಸಿದಂತೆ ಅನ್ನಿಸಿತು. ಬೆವರತೊಡಗಿದ. ಎರಡು ಸಲ ನೀರು ಕುಡಿದು ಬಂದ. ಸ್ವಲ್ಪ ಹೊತ್ತು ಸಮಾಧಾನ ಅನ್ನಿಸಿದರೂ ಪುನಃ ಸುಸ್ತು ಶುರುವಾಯಿತು. ಗಂಟಲು ಒಣಗಿತು. ಬಾಯಿಯೂ ಒಣಗಿ ಅವನು ಬಿಡುವ ಪ್ರತಿ ಉಸಿರಲ್ಲಿಯೂ ಹಸಿವಿನ ವಾಸನೆ ಬಂದಂತೆ ಅನ್ನಿಸಿತು. ಕೈ ನಡುಗತೊಡಗಿತು. ವ್ಯಾಕ್ಯೂಂ ಕ್ಲೀನರಿನ ಸದ್ದು ಅವನ ಒಳಗನ್ನು ಸೀಳುತ್ತಿರುವ ಹಸಿವಿನ ಹಿನ್ನೆಲೆ ಸಂಗೀತದಂತೆ ಭಾಸವಾಗತೊಡಗಿತು. ನಿಧಾನಕ್ಕೆ ಹಸಿವೊಂದೇ ಸತ್ಯವಾಗಿ ಅವನು ನಿಂತಿರುವ ನೆಲ, ಮಾಡುತ್ತಿದ್ದ ಕೆಲಸ, ಮನೆಯಲ್ಲಿದ್ದ ಅಪ್ಪಅಮ್ಮ ಹಾಗೂ ತಂಗಿ, ವಾರದ ಹಿಂದೆಯೇ ಆಗಬೇಕಿದ್ದರೂ ಸತಾಯಿಸುತ್ತಿದ್ದ ಸಂಬಳ – ಎಲ್ಲವೂ ಸುಳ್ಳು ಅನ್ನಿಸತೊಡಗಿತು.

ಹೀಗೆ ಹಸಿವಿನೊಂದಿಗೆ ಹೋರಾಟ ನಡೆಸುತ್ತಾ ಕೆಲಸ ಮಾಡುತ್ತಿದ್ದಾಗಲೇ ಅವನಿಗೆ ಡೆಸ್ಕ್ ಒಂದರ ಡ್ರಾಯರಿನಲ್ಲಿ ಬಿಸ್ಕೆಟ್ ಪೊಟ್ಟಣ ಕಂಡದ್ದು. ಯಾರೋ ಒಂದೆರಡು ಬಿಸ್ಕೆಟ್ ತಿಂದು ಉಳಿದದ್ದನ್ನು ಅಲ್ಲೇ ಬಿಟ್ಟು ಹೋದಂತಿತ್ತು. ಅದನ್ನು ಅಲ್ಲೇ ಬಿಟ್ಟು ಹೋದವರಿಗೆ ಮಧ್ಯರಾತ್ರಿ ಹಸಿವಿನಲ್ಲಿ ಒದ್ದಾಡುತ್ತ